ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ೮೬–೮೭ರಲ್ಲಿ ೧.೦೦ ಲಕ್ಷ ಪಣ ಒದಗಿಸಿದ್ದು ೩.೬೫ ಲಕ್ಷ ರೂ.ಗಳ ನಷ್ಟ ಮತ್ತು ಆಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ತಾರಕಾ ಜಲಾಶಯಕ್ಕೆ ಕಬಿನಿ ಹಿನ್ನೀರನ್ನು ಏತ ನೀರಾವರಿ ಮೂಲಕ ತರುವ ಬಗ್ಗೆ

೧೫೭ (೩೭೧ ಎ) ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತಾರಕಾ ಜಲಾಶಯಕ್ಕೆ ಕಬಿನಿ ಹಿನ್ನೀರನ್ನು ಏತ ನೀರಾವರಿ ಮೂಲಕ ತರಲು ಆಂದಾಜು ಪಟ್ಟಿ ತಯಾರಿಸಿರುವುದು ನಿಜವೇ, ಹಾಗಿದ್ದಲ್ಲಿ, ಈ ಯೋಜನೆ ಕಾರ್ಯಗತ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಆ) ತಾರಕಾ ಜಲಾಶಯದ ಉದ್ದೇಶಿತ ಅಚ್ಚುಕಟ್ಟು ಪ್ರದೇಶಕ್ಕೆ ಎಡ ಮತ್ತು ಬಲದಂಡೆ ನಾಲೆಗಳಿಂದ ನೀರು ಕೊಡದಿರುವಾಗ ಅನಾವಶ್ಯಕವಾಗಿ ಮತ್ತೊಂದು ಲಿಂಕ್ ಚಾನಲ್ ಮಾಡುತ್ತಿರುವ ಉದ್ದೇಶವೇನು ?

ಇ) ಇದನ್ನು ಎಷ್ಟು ಅಂದಾಜಿನಲ್ಲಿ ಮಾಡಲಾಗುತ್ತಿದೆ, ಇದರಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರೊದಗಿಸಲು ಉದ್ದೇಶಿಸಲಾಗಿದೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು. ಕಾವೇರಿ ಜಲವಿವಾದ ಇತ್ಯರ್ಥವಾದ ನಂತರ ಇದನ್ನು ಪರೀಕ್ಷಿಸಲಾಗುವುದು.

ಆ) ತಾರಕಾ ಜಲಾಶಯದ ಮುಳುಗಡೆ ಪ್ರದೇಶದ ರೈತರಿಗೆ ಕಬಿನಿ ಜಲಾಶಯದ ಮುಂಭಾಗದ ತೀರದಲ್ಲಿ ನೀರಾವರಿ ಸೌಲಭ್ಯ ಒದಗಿಸುವ ಸಲುವಾಗಿ ತಾರಕಾ ಸಂಪರ್ಕ ನಾಲೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

೧೨೨೦ ಲಕ್ಷ ರೂ.ಗಳ ತಾರಕಾ ಯೋಜನೆಯ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಲಾಗಿರುವಂತೆ ತಾರಕಾ ಎಡದಂಡೆ ನಾಲೆ ಮತ್ತು ಸಂಪರ್ಕ ನಾಲೆಯೂ ಸೇರಿದಂತೆ ತಾರಕಾ ಬಲದಂಡೆ ನಾಲೆಗಳ ಮೂಲಕ ಉದ್ದೇಶಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸಲಾಗುತ್ತಿದೆ.

ಇ) ತಾರಕಾ ಸಂಪರ್ಕ ನಾಲೆಯನ್ನು, ೧೪೧.೩೨ ಲಕ್ಷ ರೂ.ಗಳ ಆಂದಾಜಿನಲ್ಲಿ ಮಾಡಲಾಗುತ್ತಿದೆ. ಇದರಿಂದ ೧೯೨೨ ಹೆಕ್ಟೇರ್ (೪೭೫೦ ಎಕರೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಉದ್ದೇಶಿಸಲಾಗಿದೆ.

ವರುಣಾ ನಾಲೆ ಬಗ್ಗೆ

೧೫೮ (೩೭೧ ಎ) ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ವರುಣಾ ನಾಲೆ ಕೆಲಸ ಕಾರ್ಯಗಳಿಗೆ ಇದುವರೆಗೆ ಸರಕಾರ ಖರ್ಚು ಮಾಡಿರುವ ಹಣ ಎಷ್ಟು ?

ಆ) ನಾಲೆಯ ಕಾರ್ಯಪನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗಬಹುದು ?

ಇ) ನಾಲೆಯ ಕೆಲಸವನ್ನು ಶೀಘ್ರದಲ್ಲಿ ಪೂರ್ತಿಗೊಳಿಸಲು ಸರಕಾರದವರು ಯೋಚಿಸಿದ್ದಾರೆಯೆ ?